ಬಾರ್ಡರ್ ಇತ್ತು. ಸ್ವಲ್ಪ ಹೊತ್ತಿನಲ್ಲೇ ಕಾರಿನ ಸದ್ದು. ಓಡುವ ರೀತಿಯಲ್ಲಿ ಬಾಗಿಲ ಬಳಿಗೆ ಹೋದಳು. ಕಾರಿನಿಂದ ಇಳಿದದ್ದು ಸುಮತಿ ಮತ್ತು ಸುಬ್ರಹ್ಮಣ್ಯ! 'ಇಷ್ಟು ಬೇಗ ಬಂದಳಲ್ಲ!' ಎಂದು ಇವಳು ಅಂದುಕೊಳ್ಳುತ್ತಿರುವಂತೆಯೇ... 'ಅಕ್ಕಾ, ಬೇಗನೇ ಬಂದೆ. ಪ್ರಭಿನ, ಪುಟ್ಟನ್ನ ನೋಡಬೇಕಲ್ಲ ಅಂತ. ಅಡುಗೆ ಆಗಿದೆ. ಬಿಸಿ ಮಾಡಿಕೊಂಡರೆ ಸಾಕು...' ಅನ್ನುತ್ತಾ ಕಾರಿನಿಂದ ಕ್ಯಾರಿಯರ್‌ಗಳನ್ನು ಇಳಿಸಿದಳು. ವಾಸಂತಿಯೂ 'ಬಾ ಒಳಗೆ. ಬನ್ನಿ...' ಎನ್ನುವಂತೆ ಸುಬ್ರಹ್ಮಣ್ಯನನ್ನೂ ಒಳಗೆ ಕರೆದು ಕ್ಯಾರಿಯರ್ ತೆಗೆದುಕೊಂಡು ಒಳಗೆ ಹೋದಳು.

ಸುಬ್ರಹ್ಮಣ್ಯ ಇದೇ ಮೊದಲ ಸಲ ಅವಳ ಮನೆಗೆ ಬರುತ್ತಿರುವುದು. ಇಷ್ಟು ವರ್ಷವೂ ಅವಳು ಬಾಡಿಗೆ ಮನೆ ಎಂಬಂಥ ರೂಮಿನಲ್ಲೇ ಕಾಲ ಕಳೆದಿದ್ದಳು. ಎಷ್ಟೋ ಕಷ್ಟಪಟ್ಟು, ಕೂಡಿಟ್ಟ ಹಣದಲ್ಲಿ ತನ್ನದೆಂಬ ಒಂದು ಪುಟ್ಟ ಜಾಗ ಖರೀದಿಸಿ ಮನೆ ಕಟ್ಟಿಸಿದ್ದಳು. ಸಣ್ಣ ಕಾಂಪೌಂಡ್. ಇನ್ನೂ ಗಿಡಗಳನ್ನು ಹಾಕಬೇಕು. ಒಳಗೆ ಕಾಲಿಟ್ಟ. ನೋಡಿದ. ಸಣ್ಣ ವರಾಂಡ, ಒಂದು ಪುಟ್ಟ ಹಾಲ್, ಒಂದೇ ಕೋಣೆ, ಅಡುಗೆಮನೆ, ಬಚ್ಚಲು... ಎಲ್ಲವೂ ಪುಟ್ಟ ಪುಟ್ಟವು. ಅರಮನೆಯಂತಹ ಮನೆಯಲ್ಲಿ ಮಹಾರಾಣಿಯಾಗಿ ಇರಬೇಕಾದವಳು ಹೀಗಿದ್ದಾಳಲ್ಲ... ಮನಸ್ಸಿಗೆ ಕಸಿವಿಸಿಯಾಯಿತು. ಅಕ್ಕ ತಂಗಿಯರು ಸಂಭ್ರಮದಿಂದ ಕ್ಯಾರಿಯರ್‌ಗಳನ್ನು ಒಳಗೆ ಜೋಡಿಸುತ್ತ ಮಾತನಾಡುತ್ತಿದ್ದರು. ಅದರಲ್ಲಿ ಸುಮತಿಯ ಧ್ವನಿಯೇ ಜೋರು. ವಾಸಂತಿ, ಹಾ... ಹೂ... ಇಲ್ಲಿಡು... ಹೌದು... ಅಂತಷ್ಟೇ ಮಾತು. ಅಷ್ಟರಲ್ಲಿ ವಾಸಂತಿಯ ಫೋನ್ ರಿಂಗಾಯಿತು. 'ಹೇಳು ಪ್ರಭಾ, ಎಲ್ಲಿದ್ದೀಯ?' ವಾಸಂತಿಯ ಧ್ವನಿ.

'ಅಮ್ಮಾ... ಇಲ್ಲಿ ಏನೋ ಸ್ಟ್ರೈಕ್ ಅಂತೆ. ರಸ್ತೆ ಬಂದ್ ಮಾಡಿದ್ದಾರೆ. ಒಂದು ಗಂಟೆ ತಡ ಆಗುತ್ತೆ. ನೀನು ಕಾಯ್ತಿರ್ತೀಯ ಅಂತ ಹೇಳಿದೆ. ಚಿಕ್ಕಮ್ಮಂಗೆ, ಅಪ್ಪಂಗೆ ಹೇಳಿಬಿಡು...' ಅಷ್ಟರಲ್ಲಿ ಪುಟ್ಟ ಜೋರುಧ್ವನಿಯಲ್ಲಿ ಕೂಗಿದ್ದು ಕೇಳಿಸಿತು... 'ಮಮ್ಮೀ, ಅಜ್ಜಿಗೆ ಹೇಳು... ಐ ವಾಂಟ್ ಶಾವಿಗೆ ಅಂತ... ಪ್ಲೀಸ್ ಮಮ್ಮೀ... ಟೆಲ್ ಹರ್...' 'ಓಕೆ ಪುಟ್ಟ. ಐ ಹ್ಯಾವ್ ಟೋಲ್ಡ್ ಹರ್. ಡೋಂಟ್ ಸ್ಕ್ರೀಮ್...' ಇವಳು ಗದರಿದ್ದೂ ಕೇಳಿಸಿತು. 'ಪುಟ್ಟೀ, ಅವನಿಗೆ ಶಾವಿಗೆ ಮಾಡಿದ್ದೀನಿ. ಬನ್ನಿ. ಆರಾಮವಾಗಿ.' ವಾಸಂತಿ ಫೋನ್ ಕೆಳಗಿಟ್ಟಳು.

ಇದೆಲ್ಲವನ್ನೂ ಕೇಳಿಸಿಕೊಳ್ಳುತ್ತ ಕುಳಿತಿದ್ದ ಸುಬ್ರಹ್ಮಣ್ಯ. ಅಷ್ಟರಲ್ಲಿ ಕೋಡುಬಳೆ, ಕಾಫಿ , ಬರ್ಫಿ ತಂದಿಟ್ಟಳು ಸುಮತಿ. 'ಭಾವ... ಅಕ್ಕನ ಹೊಸ ಮನೆಯ ಸ್ವೀಟ್ಸ್... ತೊಗೊಳ್ಳಿ' ನಗುಮುಖದಲ್ಲಿ ನೀಡಿದಳು. 'ಅಕ್ಕಾ, ನೀನೂ ಬಾರೆ. ಜೊತೇಲಿ ಮಾತಾಡಿ ತುಂಬಾ ದಿನಗಳಾದವು' ಕೂಗಿ ಕರೆದಳು ಸುಮ.

'ದಿನಗಳಲ್ಲಮ್ಮ... ವರುಷಗಳು...' ಸುಬ್ರಹ್ಮಣ್ಯ ಹೇಳಿದ. ಅವನ ಕಣ್ಣುಗಳು ತುಂಬಿಕೊಂಡಿದ್ದವು. ಸುಮತಿಗೆ ಮಾತು ಹೊರಡಲಿಲ್ಲ. ವಾಸಂತಿ ತಂಗಿಯ ಕೂಗಿಗೆ ಓಗೊಟ್ಟು ಬಂದು ಹಾಲಿನಲ್ಲಿದ್ದ ಕುರ್ಚಿಯಲ್ಲಿ ಕುಳಿತಳು. ಮಾತಿಲ್ಲದ ಗಳಿಗೆಗಳು ಉರುಳತೊಡಗಿದವು. ಸುಮತಿ 'ನಾನು ಸ್ವಲ್ಪ ಅಡುಗೆ ಮನೆ ಸರಿ ಮಾಡ್ತೀನಿ' ಎಂದು ಎದ್ದು ಹೊರಟಳು. ಸುಬ್ರಹ್ಮಣ್ಯ ವಾಸಂತಿಯನ್ನು ನೋಡಿದ. ಅವಳ ಕೂದಲುಗಳು ಬೆಳ್ಳಗಾಗಿದ್ದವು. ಅಲ್ಲಲ್ಲಿ ಕರಿಕೂದಲ ಹಾರಾಟ. ಉದ್ದದ ಜಡೆ ಮುಂದೆ ಹಾಕಿಕೊಂಡಿದ್ದಳು. ಬಿಳಿ, ಕರಿ ಕೂದಲ ಮಿಶ್ರಣ. ಕಡು ನೀಲಿ ಸೀರೆಯಲ್ಲಿ ಚೆನ್ನಾಗಿ, ಲಕ್ಷಣವಾಗಿ ಕಾಣುತ್ತಿದ್ದಳು. ಕೆಂಪು ಬೊಟ್ಟು ಹಣೆಯ ಮೇಲೆ. ಮುಖದಲ್ಲಿ ಒಂದು ರೀತಿಯ ಪ್ರೌಢ ಕಳೆ.

'ಹೇಗಿದ್ದೀಯ?' ಧ್ವನಿ ದಪ್ಪವಾಗಿತ್ತು, ಗದ್ಗದವಾಗಿತ್ತು.

'ಚೆನ್ನಾಗಿದ್ದೀನಿ. ಕೋಡುಬಳೆ ತಿನ್ನಿ...' ಭಾರವಾದ ಧ್ವನಿ ಇವಳದು.

'ಹೂಂ...' ನಿಟ್ಟುಸಿರಿಟ್ಟ. 'ಎಷ್ಟೋ ಸಲ, ಸಾವಿರ ಸಲ ಅನ್ನಿಸಿದೆ ವಾಸಂತಿ. ಒಂದು ತಪ್ಪು ನಡೆಗೆ